ಕೊಡದ ಮಾಟದತ್ತಲೆ ಅವನ ಲಕ್ಷ್ಯ ಹೊರತು ಹತ್ತಿರವೇ ಇರುತ್ತಿದ್ದ ಹೆಣ್ಣಿನ ಮೈಮಾಟದತ್ತ ಅಲ್ಲ. ತನ್ನ ಹೆಗಲ ಮೇಲಿರುವುದು ಆರು ಮಂದಿ ಅಕ್ಕತಂಗಿಯರು ಮೀರಿ ಮಿಂಚಿದ ಕೊಡ! ಮೂರು ಮಂದಿ ಮುತ್ತೈದೆಯರು ಲೋಲಾಡಿದ ಕೊಡ! ಅವನ ಮನಸ್ಸು ಕೂಡ ಅಂತಹ ಚೆಂದುಳ್ಳ ಕೊಡ! ಮಾಯಕ್ಕ ತನಗೆ ತಾನೆ ತೃಪ್ತಗೊಂಡಳು. ಯಾವುದೇ ಕೆಲಸ ಹೇಳಿದಾಗಲೂ ಅವನದುಒಂದೇ ಮಾತು.

‘ಅಕ್ಕಾರ, ನೀವು ಏನು ಬೇಕಾದ ಕೆಲಸ ಹೇಳ್ರಿ. ಅದನ್ನ ಚಾಚೂ ತಪ್ಪದಂಗ ಮಾಡಿಕೊಡತೇನಿ. ಸ್ವಲ್ಪ ಹೆಚ್ಚು ಕಡಿಮಿ ಆದ್ರ ಹೊಟ್ಯಾಗ ಹಾಕ್ಕೊಳ್ರಿ.’ ಅವನು ಹೇಳುತ್ತಿದ್ದುದು ಇದೊಂದೆ ಮಾತು.

‘ಅಲ್ಲೊ ನಾಗು, ಶ್ರದ್ಧೆ ಅನ್ನೋದನ್ನ ನಿನ್ನ ಹತ್ತಿರ ಬಣವಿ ಮಾಡಿ ಒಟ್ಟಗೊಂಡಿಯಲ್ಲೋ. ನಮಗೂ ಸ್ವಲ್ಪ ಕೊಡು. ನನ್ನ ಮೈದುನ ಸಿದ್ದಣ್ಣ ಮತ್ತು ನೀನು ಯಾವಾಗ್ಲೂ ಕೂಡಿಯೇ ಇರ್ತೀರಿ. ಅಂವ್ಯಾಕ ಹಂಗ ಅದಾನು. ನೀನ್ಯಾಕ ಹೀಂಗ ಅದೀ’, ಅದಕ್ಕೆ ನಾಗಣ್ಣ ಏನು ಉತ್ತರ ಹೇಳಿಯಾನು? ಸಿದ್ದೂನ ಬಗ್ಗೆ ಏನಾದರೂ ಅಪಚಾರ ಮಾತಾಡಿದರೆ ಅಕ್ಕ ನೊಂದುಕೊಳ್ಳುವಳೆಂದು ಆತ ಅಳುಕಿರಬೇಕು.

‘ಹಂಗೇನಿಲ್ರಿ. ಅಂವನೂ ಚಲೋನ ಅದಾನಲ್ರಿ. ನಾ ಇನ್ನ ಬರ್ತೇನ್ರಿ.’ ಮತ್ತೇನಾದರೂ ಜಾಸ್ತಿ ಕೇಳಿ ಗೀಳಿದರೆ ಏನು ಗತಿ ಎಂದು ಕಣ್ಣು ಕೆಳಗೆ ಮಾಡುತ್ತಿದ್ದ. ಮತ್ತೊಬ್ಬರ ಮನೆತನದ ಜಗಳದಲ್ಲಿ ತಾನೇಕೆ ಸಿಕ್ಕಿಹಾಕಿಕೊಳ್ಳಬೇಕೆಂದು ಇರಬೇಕು. ಆತ ಸದ್ದಿಲ್ಲದೆ ಜಾಗ ಖಾಲಿ ಮಾಡುತ್ತಿದ್ದ. ತಿರುಗಿ ನೋಡಿದರೆ ದೂರದಲ್ಲಿ ಕಟ್ಟೆಗೆ ನೀರು ಸುರುವಿ ಸ್ವಚ್ಛಗೊಳಿಸುತ್ತಿರುವನು. ಮಾಯಕ್ಕ ತಮ್ಮನ್ನು ಮೀರಿ ಬೆಳೆಯಬಹುದೆಂದು ಸಿದ್ದಣ್ಣನಾಗಲಿ, ಸೋಮಣ್ಣನಾಗಲಿ ಎಣಿಸಿರಲಿಲ್ಲ. ಮುಂದಿನ ದಿನಗಳಲ್ಲಾದರೂ ಇವಳಿಗೆ ಕಡಿವಾಣ ಹಾಕದಿದ್ದರೆ ತಮ್ಮನ್ನೀಕೆ ಸರ್ವನಾಶ ಮಾಡುವುದು ಖಂಡಿತ. ಅದಕ್ಕಾಗಿ ಸಿದ್ದಣ್ಣ ಈಗೀಗ ಸೋಮಣ್ಣನ ಜೊತೆ ಕೈಜೋಡಿಸತೊಡಗಿದ್ದಾನೆ. ತಾನು ಮುಂದೆ ಆರಿಸಿ ಬರಲಿ, ಬರದಿರಲಿ, ಮಾಯಕ್ಕ ಮಾತ್ರ ಮತ್ತೆ ಆರಿಸಿ ಬರಕೂಡದು. ಅಗತ್ಯ ಎನಿಸಿದರೆ ಸೋಮಣ್ಣನ ಬೆನ್ನಿಗೆ ನಿಲ್ಲಬೇಕೆ ಹೊರತು ಮನೆಯವಳೆಂದು ಆಕೆಯ ಬೆಂಬಲಕ್ಕೆ ನಿಲ್ಲಬಾರದು. ಹೇಗಿದ್ದರೂ ತಾನು ಒಂದು ಸಲ ಅಧ್ಯಕ್ಷನಾಗಿ ಅಧಿಕಾರ ಮಾಡಿದ್ದೇನೆ. ಸಾಕು, ಸಿದ್ದಣ್ಣನಿಗೆ ಅಧಿಕಾರ ಅನುಭವಿಸಿದ ಖುಷಿಗಿಂತ ಅಧಿಕಾರ ಕಳೆದುಕೊಂಡ ದುಃಖವೇ ತುಂಬಿಕೊಂಡಿದೆ. ಅದೂ ಅಧಿಕಾರವನ್ನು ತನ್ನ ಅತ್ತಿಗೆಯಿಂದ ಕಳೆದುಕೊಳ್ಳಬೇಕಾಯಿತಲ್ಲ! ಅದು ತನ್ನನ್ನು ಜೀವನಪರ್ಯಂತ ಕಾಡಲಿದೆ. ಅವನನ್ನು ಮಾಯಕ್ಕ ಸೋಲಿಸಿದ್ದು ಇಡೀ ನಾಡಿನಲ್ಲಿ ಸುದ್ದಿಯಾಗಿತ್ತು.



‘ಅತ್ತಿಗೆಯಿಂದ ಮೈದುನನ ಸೋಲು. ಮಾಯವ್ವನಿಗೆ ಪ್ರಚಂಡ ಗೆಲುವು.’ ಪತ್ರಿಕೆಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ಪ್ರಕಟವಾಗಿತ್ತು. ಸಿದ್ದಣ್ಣನಿಗೆ ಆ ದಿನ ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸುವಷ್ಟು ನಿರಾಶೆ ಕವಿದಿತ್ತು. ತನ್ನ ಹತಾಶೆ, ನೋವುಗಳನ್ನು ನಾಲ್ಕಾರು ಸಲ ಹೊರಹಾಕಿದ್ದ.

‘ಮಾಯಕ್ಕ ನನ್ನನ್ನ ಮಗ ಅಂತ ಕರೀತಿದ್ಲು. ಆಕಿ ನನ್ನ ಅತ್ತಿಗಿ ಖರೆ. ತಾಯಿ ಇದ್ದಂಗ. ಆದರ ತಾಯಿ ಮಗನಿಗೆ ಮೋಸ ಮಾಡ್ತಾಳೇನು? ನಾನು ಎಲ್ಲಾ ಸರಿಯಾಗಿ ಮಾಡಿಕೊಂಡು ಹೊಂಟಿದ್ದೆ. ಈಕೆ ಯಾಕೆ ಇಲೆಕ್ಷನ್‌ಗೆ ನಿಲ್ಲಬೇಕಾಗಿತ್ತು? ನನ್ನ ವಿರೋಧಿಗಳು ಎಲ್ಲೆಲ್ಲಿ ಇದ್ದರಂತ ತಿಳಿಲಿಲ್ಲ. ಎಲ್ಲಾರೂ ಸೇರಿ ಮೋಸದಿಂದ ನನ್ನ ಸೋಲಿಸ್ಯಾರ. ನಾನು ಇದನ್ನು ಸುಮ್ಮನ ಬಿಡಂಗಿಲ್ಲ. ನಾನೇ ಮತ್ತ ಅಧಿಕಾರಕ್ಕೆ ಬರ್ತೇನಿ. ನೋಡ್ತಾ ಇರಿ. ಈಕಿ ತಾಯಿಯಲ್ಲ. ತಾಯಿ ರೂಪದಾಗ ಇರುವಂಥ ರಾಕ್ಷಸಿ’.

ಸಿದ್ದಣ್ಣ ಹಾಗೆ ಹೇಳಿದ ಕೂಡಲೆ ಅಲ್ಲಿಯೇ ನಿಂತಿದ್ದ ನಾಗಪ್ಪನ ಮೈ ಉರಿಯಿತು. ‘ಏಯ್ ಸಿದ್ದು, ಬಾಯಿ ಬಿಗಿ ಹಿಡಿದು ಮಾತಾಡು. ಏನು ಮಾತಾಡ್ತಿದ್ದಿ? ನಿಮ್ಮ ವೈನಿ ಬಗ್ಗೆ ಎಷ್ಟು ಕೆಟ್ಟ ಮಾತಾಡ್ತಿದ್ದಿ? ಸುತ್ತಮುತ್ತ ಮಂದಿ ಅದಾರು.’

‘ನಾ ಮಾತಾಡುವವನೆ. ಮಾಯಕ್ಕನ ಬಗ್ಗೆ ನಾ ಮಾತಾಡಿದ್ರ ನಿನಗ್ಯಾಕ ಉರೀತದ?’

‘ಹಾಂ... ಏನಂದಿ? ನಿನ್ನ ನಾಲಗೀನ ಸೀಳ್ತೇನಿ’.

ನಾಗಣ್ಣ ಒಮ್ಮೆಲೆ ಕೈಮಾಡಿ ಸಿದ್ದಣ್ಣನ ಬಾಯಿಗೆ ಗುದ್ದಿದ. ಬಾಯಿಯಿಂದ ರಕ್ತ ಒಸರಿತು. ಅವನು ಅದನ್ನು ಒರಿಸಿಕೊಳ್ಳುವುದರೊಳಗೆ ಕಪಾಳಕ್ಕೆ ಜೋರಾಗಿ ಬೀಸಿದ. ಸಿದ್ದಣ್ಣನ ಕೆನ್ನೆಗೆ ಬಿದ್ದ ಹೊಡೆತದ ಸಪ್ಪಳ ಪಂಚಾಯಿತಿಯಲ್ಲಿ ಕುಳಿತಿದ್ದ ಮಾಯಕ್ಕನಿಗೂ ಕೇಳಿಸಿರಬೇಕು.

‘ನಾಗು, ನೀನು ಇವತ್ತು ನಿಜವಾಗಿ ನನ್ನ ತಮ್ಮ ಆದೀ. ಅಕ್ಕಗ ಗೌರವ ತಂದುಕೊಟ್ಟಿ.’ ತನಗಾದ ಅವಮಾನವನ್ನು ತಕ್ಕ ರೀತಿಯಲ್ಲಿಯೆ ತೀರಿಸಿದೆಯೆಂದು